# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 819 |
| ಸದಸ್ಯರ ಹೆಸರು | ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 20.09.2022. |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಗಣಿಗಾರಿಕೆ ಮಾಡುವಾಗ ನಿಯಮಗಳನ್ನು ಪಾಲಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ; | ಗಣಿ ಗುತ್ತಿಗೆದಾರರು ಪರವಾನಿಗೆ ಪಡೆದ ಗುತ್ತಿಗೆ ಪ್ರದೇಶಗಳಲ್ಲಿ ಅನುಮೋದಿತ ಕ್ವಾರಿಯಿಂಗ್ ಪ್ಲಾನ್, Director General Mines Safety (DGMS) ರವರು ನೀಡುವ ಅನುಮತಿಗಳಲ್ಲಿ ವಿಧಿಸಿರುವ ಷರತ್ತು ಮತ್ತು ನಿಬಂಧನೆಗಳನ್ನು ಪಾಲಿಸಿ ಗಣಿಗಾರಿಕೆ ನಡೆಸದಿರುವುದು ಕಂಡುಬಂದಿರುತ್ತದೆ.<br><br>ಈ ಬಗ್ಗೆ ನಿಯಮಗಳನುಸಾರ ಪರಿಶೀಲಿಸಿ, ದಂಡ ವಿಧಿಸುವ, ಪ್ರಕರಣಗಳನ್ನು ದಾಖಲಿಸುವ ಹಾಗೂ ಕಲ್ಲುಗಣಿ ಗುತ್ತಿಗೆಗಳನ್ನು ನಿಲಂಬನೆಯಲ್ಲಿರುವ ಮತ್ತು ರದ್ದುಪಡಿಸುವ ಕ್ರಮವನ್ನು ಜರುಗಿಸಲಾಗುತ್ತಿರುತ್ತದೆ.<br><br>ಮುಂದುವರೆದು, ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ದಿನಾಂಕ 22.07.2022 ರಂದು ಸುತ್ತೋಲೆ ಜಾರಿ ಮಾಡಿದ್ದು, ಷರತ್ತು ಮತ್ತು ನಿಬಂಧನೆಗಳು ಪಾಲನೆಯಾಗಿರುವ ಬಗ್ಗೆ ಅನುಪಾಲನಾ ವರದಿ ಸಲ್ಲಿಸುವವರೆಗೆ ಗಣಿ ಕಾರ್ಯ ಚಟುವಟಿಕೆಗಳನ್ನು ನಿಲಂಬನೆಗೊಳಿಸಲು ನಿರ್ದೇಶನಗಳನ್ನು ನೀಡಲಾಗಿದೆ.<br><br>ಮೇಲ್ಕಂಡಂತೆ ಚಾಲ್ತಿ ನಿಯಮಗಳನ್ನು / ಸುತ್ತೋಲೆಗಳನ್ನು ಉಲ್ಲಂಘಿಸುವ ಗಣಿ ಗುತ್ತಿಗೆಗಳನ್ನು ನಿಯಮಾನುಸಾರ ಸ್ಥಗಿತಗೊಳಿಸಲಾಗುತ್ತಿದೆ. |
| ಆ) | ಗಣಿಗಾರಿಕೆ ಮಾಡಿದ ಮೇಲೆ ಉಪಯೋಗಕ್ಕೆ ಬಾರದ ಮಣ್ಣು ಮತ್ತು ಕಲ್ಲುಗಳನ್ನು ರಾಶಿ ರಾಶಿಯಾಗಿ ಅನುಮತಿ ನೀಡಿದ ಗಣಿಗಾರಿಕೆ ಪ್ರದೇಶಕ್ಕಿಂತ ಇತರೆ ಜಮೀನಿನಲ್ಲಿ ಹಾಕಿರುವುದರಿಂದ ಅಕ್ಕ ಪಕ್ಕದ ರೈತರ ಜಮೀನಿಗೆ, ಅವರು- | ಬಂದಿರುತ್ತದೆ.<br>ಗಣಿ ಗುತ್ತಿಗೆ ಪ್ರದೇಶದಲ್ಲಿ ಉತ್ಪಾದನೆಯಾಗುವ ಗಣಿ ತ್ಯಾಜ್ಯವನ್ನು ಗುತ್ತಿಗೆದಾರನು ಅನುಮೋದಿತ ಕ್ವಾರಿಯಿಂಗ್ ಪ್ಲಾನ್ ನಲ್ಲಿ ನಿಗದಿಪಡಿಸಿರುವ ಸ್ಥಳದಲ್ಲಿಯೇ ಶೇಖರಣೆ ಮಾಡಬೇಕಾಗಿರುತ್ತದೆ.<br><br>ಗುತ್ತಿಗೆ ಪ್ರದೇಶಗಳ ವಿಸ್ತೀರ್ಣ ಕಡಿಮೆ ಆಗಿದ್ದಲ್ಲಿ ಗಣಿ ಚಟುವಟಿಕೆ ನಡೆಸಲು ಅಡೆತಡೆ ಉಂಟಾಗುವ ಕಾರಣ ಗುತ್ತಿಗೆ ಪ್ರದೇಶಕ್ಕೆ ಹೊಂದಿಕೊಂಡಂತಿರುವ ಸರ್ಕಾರಿ / ಪಟ್ಟಾ ಜಮೀನಿನಲ್ಲಿ ಕಂದಾಯ ಇಲಾಖೆಯಿಂದ ಅನುಮತಿ ಪಡೆದು ಶೇಖರಣೆ ಮಾಡುತ್ತಿರುವುದು ಕಂಡುಬಂದಿರುತ್ತದೆ. |

<table>
<tr>
<td></td>
<td>ಬೆಳೆಯುವ ಬೆಳೆಗಳು ನಾಶವಾಗುವಂತಹ ಪರಿಸ್ಥಿತಿ ನಿರ್ಮಾಣ ವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು;</td>
<td>ಈ ರೀತಿ ಅನುಮತಿ ಪಡೆಯದೆ ಗುತ್ತಿಗೆ ಪ್ರದೇಶದ ಹೊರಗಡೆ ಗಣಿ ತ್ಯಾಜ್ಯವನ್ನು ಶೇಖರಣೆ ಮಾಡುವ ಪ್ರಕರಣಗಳಲ್ಲಿ ಕಂದಾಯ ಇಲಾಖೆಯಿಂದ ಮೊಕದ್ದಮೆಗಳನ್ನು ದಾಖಲಿಸಿ ದಂಡವನ್ನು ಸಂಗ್ರಹಿಸಲಾಗುತ್ತಿದೆ.</td>
</tr>
<tr>
<td>ಇ)</td>
<td>ಅಕ್ರಮ ಗಣಿಗಾರಿಕೆಯನ್ನು ತಡೆಗಟ್ಟುವಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?</td>
<td>ಅಕ್ರಮ ಗಣಿಗಾರಿಕೆ ನಡೆಸುತ್ತಿರುವವರ ವಿರುದ್ಧ ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ, 1957 ಹಾಗೂ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರಂತೆ ಮೊಕದ್ದಮೆಗಳನ್ನು ದಾಖಲಿಸಲು ಹಾಗೂ ದಂಡ ವಿಧಿಸಿ ಸಂಗ್ರಹಿಸಲು ಕ್ರಮವಹಿಸಲಾಗಿದೆ. ಈ ಸಂಬಂಧ ಕಳೆದ ಮೂರು ವರ್ಷಗಳಲ್ಲಿ ಕೈಗೊಂಡ ಕ್ರಮಗಳ ವಿವರ ಕೆಳಕಂಡಂತಿದೆ:<br>
ಮುಖ್ಯ ಖನಿಜ ಗಣಿಗಾರಿಕೆ:- (₹ಲಕ್ಷ ಗಳಲ್ಲಿ)
<table>
<tr><th>ಕ್ರ. ಸಂ.</th><th>ವರ್ಷ</th><th>ಪತ್ತೆ ಹಚ್ಚಿದ ಪ್ರಕರಣಗಳ ಸಂಖ್ಯೆ</th><th>ವಿಧಿಸಿದ ದಂಡ</th><th>ದಾಖಲಿಸಿರುವ ಮೊಕದ್ದಮೆಗಳು</th></tr>
<tr><td>1.</td><td>2019-20</td><td>08</td><td>0.15</td><td>07</td></tr>
<tr><td>2.</td><td>2020-21</td><td>04</td><td>8.00</td><td>-</td></tr>
<tr><td>3.</td><td>2021-22</td><td>10</td><td>-</td><td>10</td></tr>
<tr><td colspan="2">ಒಟ್ಟು</td><td>22</td><td>8.15</td><td>17</td></tr>
</table>
ಕಲ್ಲು ಗಣಿಗಾರಿಕೆ:- (₹ಲಕ್ಷ ಗಳಲ್ಲಿ)
<table>
<tr><th>ಕ್ರ. ಸಂ.</th><th>ವರ್ಷ</th><th>ಪತ್ತೆಹಚ್ಚಿದ ಪ್ರಕರಣಗಳ ಸಂಖ್ಯೆ</th><th>ವಿಧಿಸಿದ ದಂಡ</th><th>ದಾಖಲಿಸಿರುವ ಮೊಕದ್ದಮೆಗಳು</th></tr>
<tr><td>1.</td><td>2019-20</td><td>266</td><td>908.70</td><td>117</td></tr>
<tr><td>2.</td><td>2020-21</td><td>555</td><td>1576.62</td><td>149</td></tr>
<tr><td>3.</td><td>2021-22</td><td>153</td><td>292.58</td><td>47</td></tr>
<tr><td></td><td>ಒಟ್ಟು</td><td>974</td><td>2777.9</td><td>313</td></tr>
</table>
ಮರಳು ಗಣಿಗಾರಿಕೆ:- (₹ಲಕ್ಷ ಗಳಲ್ಲಿ)
<table>
<tr><th>ಕ್ರ. ಸಂ.</th><th>ವರ್ಷ</th><th>ಪತ್ತೆಹಚ್ಚಿದ ಪ್ರಕರಣಗಳ ಸಂಖ್ಯೆ</th><th>ವಿಧಿಸಿದ ದಂಡ</th><th>ದಾಖಲಿಸಿರುವ ಮೊಕದ್ದಮೆಗಳು</th></tr>
<tr><td>1.</td><td>2019-20</td><td>240</td><td>128.81</td><td>106</td></tr>
<tr><td>2.</td><td>2020-21</td><td>293</td><td>82.55</td><td>72</td></tr>
<tr><td>3.</td><td>2021-22</td><td>140</td><td>50.08</td><td>67</td></tr>
<tr><td></td><td>ಒಟ್ಟು</td><td>673</td><td>261.44</td><td>245</td></tr>
</table>
</td>
</tr>
</table>

ಸಂಖ್ಯೆ ಸಿಐ-ಎಂಎಂಎನ್/372/2022

Halappa BA

**(ಆಚಾರ್ ಹಾಲಪ್ಪ ಬಸಪ್ಪ)**
ಗಣಿ ಮತ್ತು ಭೂವಿಜ್ಞಾನ ಹಾಗೂ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು
ವಿಕಲಚೇತನರ, ಹಿರಿಯ ನಾಗರಿಕರ
ಸಬಲೀಕರಣ ಸಚಿವರು.